aglasem.com

FOR KARNATAKA CLASS 10 PREPARATION

Karnataka SSLC Model Question Paper 2027 for Social Science (Paper 1, Kannada Medium)

EXAM	YEAR	TYPE	SUBJECT
Karnataka Class 10	2027	Sample Paper	Social Science

85-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

2026–27 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 1

S.S.L.C. MODEL QUESTION PAPER - 1 : 2026 - 27

ವಿಷಯ : ಸಮಾಜವಿಜ್ಞಾನ

Subject : SOCIAL SCIENCE

ವಿಷಯ ಸಂಕೇತ : 85-K | **Subject Code : 85-K**

ಸಮಯ : 3 ಗಂಟೆ 15 ನಿಮಿಷಗಳು] | [Time : 3 Hours 15 Minutes

ಗರಿಷ್ಠ ಅಂಕಗಳು : 80] | [Max. Marks : 80

ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[Turn over

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ / ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದು ಮಾತ್ರ ಸರಿಯಾಗಿದೆ ಅಥವಾ ಹೆಚ್ಚು ಸೂಕ್ತವಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಪೂರ್ಣ ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. **8x1=8**

1. ಮೊದಲನೇ ಆಂಗ್ಲೋ ಮೈಸೂರು ಯುದ್ಧವನ್ನು ಕೊನೆಗೊಳಿಸಿದ ಒಪ್ಪಂದ

A) ಮಂಗಳೂರು ಒಪ್ಪಂದ

B) ಶ್ರೀರಂಗಪಟ್ಟಣ ಒಪ್ಪಂದ

C) ಸಾಲ್ಬಾಯ್ ಒಪ್ಪಂದ

D) ಮದ್ರಾಸ್ ಒಪ್ಪಂದ

2. 1917ರಲ್ಲಿ ಸಮಾಜವಾದಿ ಕ್ರಾಂತಿಯು ಸಂಭವಿಸಿದ ದೇಶ

A) ರಷ್ಯಾ

B) ಜಪಾನ್

C) ಬ್ರಿಟನ್

D) ಫ್ರಾನ್ಸ್

3. ವಿಶ್ವಸಂಸ್ಥೆಯ ಮುಖ್ಯ ಕಛೇರಿ ಇರುವುದು

A) ಹೇಗ್ ನಗರದಲ್ಲಿ

B) ಜಿನೇವಾದಲ್ಲಿ

C) ವಾಷಿಂಗ್ಟನ್‌ನಲ್ಲಿ

D) ನ್ಯೂಯಾರ್ಕ್‌ನಲ್ಲಿ

4. ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸುವ ನಮ್ಮ ಸಂವಿಧಾನದ ವಿಧಿ

A) 24 ನೇ ವಿಧಿ

B) 42 ನೇ ವಿಧಿ

C) 17 ನೇ ವಿಧಿ

D) 30 ನೇ ವಿಧಿ

5. ಜ್ಯೋತಿಬಾ ಫುಲೆಯವರು ಅಸ್ಪೃಶ್ಯತಾ ವಿರೋಧಿ ಚಳವಳಿಯನ್ನು ಪ್ರಾರಂಭಿಸಿದ್ದು

A) ಕರ್ನಾಟಕದಲ್ಲಿ

B) ಮಹಾರಾಷ್ಟ್ರದಲ್ಲಿ

C) ತಮಿಳುನಾಡಿನಲ್ಲಿ

D) ಕೇರಳದಲ್ಲಿ

6. ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಏಪ್ರಿಲ್–ಮೇ ತಿಂಗಳಲ್ಲಿ ಕರ್ನಾಟಕದಲ್ಲಿ ಉಂಟಾಗುವ ಪರಿಸರಣ ಮಳೆ

A) ಆಂಧೀಸ್

B) ಕಾಲ ಬೈಸಾಕಿ

C) ಕಾಫಿ ತುಂತುರು

D) ಮಾವಿನ ಹೊಯ್ಲು

7. ಇವುಗಳಲ್ಲಿ ಪರೋಕ್ಷ ತೆರಿಗೆಯು

A) ಆದಾಯ ತೆರಿಗೆ

B) ಆಮದು ಮತ್ತು ರಫ್ತು ತೆರಿಗೆ

C) ಕಂಪನಿ ತೆರಿಗೆ

D) ಸ್ಟಾಂಪು ತೆರಿಗೆ

8. ಆರ್ಯನ್ ಒಬ್ಬ ವ್ಯಾಪಾರಿಯಾಗಿದ್ದು, ತನ್ನ ವ್ಯಾಪಾರಕ್ಕೆ ಸಂಬಂಧಿಸಿದಂತೆ ಆತನು ಹೊಂದಿರುವ ಬ್ಯಾಂಕ್ ಖಾತೆಯು

A) ಉಳಿತಾಯ ಖಾತೆ

B) ನಿಶ್ಚಿತ ಠೇವಣಿ ಖಾತೆ

C) ಚಾಲ್ತಿ ಖಾತೆ

D) ಆವರ್ತ ಠೇವಣಿ ಖಾತೆ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿ. **8x1=8**

9. ಮಹಲ್ವಾರಿ ಪದ್ಧತಿಯಲ್ಲಿ ಮಹಲ್ ಎಂದರೇನು?

10. ಹಿಟ್ಲರನು ಬೂದು ಅಂಗಿದಳ ಎಂಬ ಕ್ರೌರ್ಯಪಡೆಯನ್ನು ಏಕೆ ಸಂಘಟಿಸಿದನು?

11. ವಿಶ್ವಸಂಸ್ಥೆ ಎಂಬ ಪದವನ್ನು ಯಾರು ರೂಪಿಸಿದರು?

12. ಕೈಗಾ ವಿರೋಧಿ ಚಳವಳಿಯ ನೇತೃತ್ವವನ್ನು ವಹಿಸಿದ್ದ ನಾಯಕರನ್ನು ಹೆಸರಿಸಿ.

13. ಭಾರತ ಸರ್ಕಾರವು ನವಶೇವಾ ಬಂದರನ್ನು ಏಕೆ ನಿರ್ಮಿಸಿತು?

14. ಸಾಫ್ಟವೇರ್ ಟೆಕ್ನಾಲಜಿ ಪಾರ್ಕ್‌ಗಳನ್ನು ಭಾರತ ಸರ್ಕಾರವು ಸ್ಥಾಪಿಸಿದೆ. ಏಕೆ?

15. ವಸತಿಹೀನರಿಗೆ ಮನೆಗಳನ್ನು ನಿರ್ಮಿಸಿಕೊಡಲು ಸರ್ಕಾರವು ಜಾರಿಗೆ ತಂದಿರುವ ಯಾವುದಾದರೂ ಒಂದು ಯೋಜನೆಯನ್ನು ಹೆಸರಿಸಿ.

16. ಫ್ರೆಂಚ್ ಭಾಷೆಯ ಯಾವ ಪದದಿಂದ ಉದ್ಯಮಿ ಎಂಬ ಪದವು ಬಂದಿದೆ?

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. **8x2=16**

17. ಕೇಂದ್ರ ಲೋಕಸೇವಾ ಆಯೋಗದ ಕಾರ್ಯಗಳನ್ನು ವಿವರಿಸಿ.

ಅಥವಾ

ಆಹಾರ ಮತ್ತು ಕೃಷಿ ಸಂಸ್ಥೆಯ ಉದ್ದೇಶಗಳನ್ನು ವಿವರಿಸಿ.

18. ಬಾಲ್ಯವಿವಾಹಕ್ಕೆ ಕಾರಣಗಳಾವುವು?

ಅಥವಾ

ಸಾಮಾಜಿಕ ಸ್ತರ ವಿನ್ಯಾಸವು ಹೇಗೆ ರೂಪುಗೊಂಡಿದೆ?

19. ಸಹಾಯಕ ಸೈನ್ಯ ಪದ್ಧತಿಯ ಮೂಲಕ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರ್ಪಡೆಗೊಂಡ ಭಾರತೀಯ ಸಂಸ್ಥಾನಗಳನ್ನು ಪಟ್ಟಿಮಾಡಿ.

20. ಜುನಾಗಡವು ಭಾರತ ಒಕ್ಕೂಟಕ್ಕೆ ಹೇಗೆ ಸೇರ್ಪಡೆಯಾಯಿತು?

21. ಹಿರಾಕುಡ್ ನದಿ ಕಣಿವೆ ಯೋಜನೆಯನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ.

22. ಕಬ್ಬು ಮತ್ತು ಹೊಗೆಸೊಪ್ಪುಗಳೆರಡು ವಾಣಿಜ್ಯ ಬೆಳೆಗಳಾಗಿದ್ದರೂ ಅವುಗಳ ಬೇಸಾಯಕ್ಕೆ ಬೇಕಾಗುವ ಭೌಗೋಳಿಕ ಅಂಶಗಳಲ್ಲಿ ವ್ಯತ್ಯಾಸವಿದೆ. ಸಮರ್ಥಿಸಿ.

23. ನೀತಿ ಆಯೋಗ (NITI AYOG) ದ ಉದ್ದೇಶಗಳಾವುವು?

24. ಜಾನ್ ಎಫ್. ಕೆನಡಿಯವರು ಅಮೆರಿಕ ಸಂಯುಕ್ತ ಸಂಸ್ಥಾನದ ಗ್ರಾಹಕರಿಗೆ ನೀಡಿರುವ ಹಕ್ಕುಗಳನ್ನು ವಿವರಿಸಿ.

IV. ಈ ಪ್ರಶ್ನೆಗಳಿಗೆ ಆರು ವಾಕ್ಯ/ಅಂಶಗಳಲ್ಲಿ ಉತ್ತರಿಸಿ. **9x3=27**

25. ಡಚ್ಚರ ವಿರುದ್ಧದ ಮಾರ್ತಾಂಡವರ್ಮನ ಹೋರಾಟವನ್ನು ವಿವರಿಸಿ.

ಅಥವಾ

ಬ್ರಿಟಿಷ್ ಶಿಕ್ಷಣ ಪದ್ಧತಿಯಿಂದ ಭಾರತದಲ್ಲಾದ ಪರಿಣಾಮಗಳನ್ನು ವಿವರಿಸಿ.

26. ಅರಣ್ಯಗಳ ಸಂರಕ್ಷಣಾ ವಿಧಾನಗಳಾವುವು?

ಅಥವಾ

ಗ್ಲೋಬಲ್ ಪೊಜಿಶನಿಂಗ್ ಸಿಸ್ಟಮ್ ತಂತ್ರಜ್ಞಾನದ ಉಪಯೋಗಗಳಾವುವು?

27. ಮಹಿಳೆಯರ ಬಲವರ್ಧನೆಯಲ್ಲಿ ಮಹಿಳಾ ಸ್ವ–ಸಹಾಯ ಸಂಘಗಳ ಪಾತ್ರವನ್ನು ವಿವರಿಸಿ.

ಅಥವಾ

ಸಾರ್ವಜನಿಕ ಹಣಕಾಸಿನ ಮಹತ್ವವನ್ನು ವಿವರಿಸಿ.

28. ಬ್ಯಾಂಕುಗಳು ನಿರ್ವಹಿಸುವ ಕಾರ್ಯಗಳಾವುವು?

ಅಥವಾ

ಉದ್ಯಮಿಗಳ ಗುಣಲಕ್ಷಣಗಳಾವುವು?

29. ಬ್ರಹ್ಮಸಮಾಜದ ಉದ್ದೇಶಗಳನ್ನು ವಿಶ್ಲೇಷಿಸಿ.

30. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆರ್ಥಿಕ ಕಾರಣಗಳಾವುವು?

31. ಭಾರತದ ವಿದೇಶಾಂಗ ನೀತಿಯ ಮೂಲತತ್ವಗಳನ್ನು ವಿವರಿಸಿ.

32. ನಿರುದ್ಯೋಗವು ಹೇಗೆ ಒಂದು ಗಂಭೀರ ಸಾಮಾಜಿಕ ಸಮಸ್ಯೆಯಾಗಿದೆ?

33. ಚಂಡಮಾರುತದ ಪರಿಣಾಮಗಳು ಯಾವುವು?

V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯ/ಅಂಶಗಳಲ್ಲಿ ಉತ್ತರಿಸಿ. **4x4=16**

34. ಕಿತ್ತೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರವನ್ನು ವಿಶ್ಲೇಷಿಸಿ.

ಅಥವಾ

ಭಾರತೀಯ ಸಮಾಜವನ್ನು ಸುಧಾರಿಸುವಲ್ಲಿ ದಯಾನಂದ ಸರಸ್ವತಿಯವರ ಪಾತ್ರವನ್ನು ವಿಶ್ಲೇಷಿಸಿ.

35. ಕಪ್ಪು ಮಣ್ಣು, ಕೆಂಪು ಮಣ್ಣಿಗಿಂತ ಹೇಗೆ ಭಿನ್ನವಾಗಿದೆ?

ಅಥವಾ

ಭಾರತದಲ್ಲಿ ಕೈಗಾರಿಕೆಗಳು ಕೆಲವೇ ಪ್ರದೇಶಗಳಲ್ಲಿ ಮಾತ್ರ ಸ್ಥಾನೀಕರಣಗೊಂಡಿವೆ. ಏಕೆ?

36. ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಸುಭಾಷ್ ಚಂದ್ರ ಬೋಸರ ಹೋರಾಟವು ಒಂದು ಪ್ರಮುಖ ಮೈಲುಗಲ್ಲಾಗಿದೆ, ಸಮರ್ಥಿಸಿ.

37. ಭಾರತದಲ್ಲಿ ಲಿಂಗ ತಾರತಮ್ಯವನ್ನು ಹೋಗಲಾಡಿಸಲು ತೆಗೆದುಕೊಂಡಿರುವ ಕ್ರಮಗಳನ್ನು ವಿವರಿಸಿ.

VI. 38. ಈ ಕೆಳಗಿನವುಗಳಲ್ಲಿ ಯಾವುದಾದರೂ ಐದನ್ನು ನಿಮಗೆ ಕೊಟ್ಟಿರುವ ಭಾರತದ ನಕ್ಷೆಯಲ್ಲಿ ಗುರುತಿಸಿ. **5x1=5**

A. ಇಂದಿರಾ ಪಾಯಿಂಟ್
B. 82^0 30^1 ಪೂರ್ವ ರೇಖಾಂಶ
C. ಬಾಂಬೆ ಹೈ
D. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ
E. ಬರ್ನಪುರ್
F. ಕೋಸಿ ನದಿ ಕಣಿವೆ ಯೋಜನೆ
G. ಉತ್ಕಲ ತೀರ
H. ಕೊಚ್ಚಿ
I. ಕನ್ಯಾಕುಮಾರಿ
J. ಭದ್ರಾವತಿ

ದೃಷ್ಟಿವಿಕಲ ಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ:

(ಪ್ರಶ್ನೆ ಸಂಖ್ಯೆ 38ರ ಬದಲಿಗೆ)

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಪ್ರಮುಖ ಉದ್ದೇಶಗಳನ್ನು ವಿವರಿಸಿ.

ಅಥವಾ

ಹಿಮಾಲಯ ಪರ್ವತಗಳ ಅನುಕೂಲಗಳನ್ನು ವಿವರಿಸಿ.